# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 27.12.2010**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ: 27.12.2010 ರಂದು ಬೆಳಿಗ್ಗೆ 10.15 ಗಂಟೆಗೆ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸಂಬಂಧಪಟ್ಟ ಮಹದೇವಪುರ ವಲಯಕ್ಕೆ ಭೇಟಿ ನೀಡಿ ಸಂಬಂಧಪಟ್ಟ ಕಛೇರಿಗಳನ್ನು ತಪಾಸಣೆ ಮಾಡಿದ್ದು, ತಪಾಸಣೆ ಸಮಯದಲ್ಲಿ ಕಛೇರಿಗಳಲ್ಲಿನ ಬಹುತೇಕ ಸಿಬ್ಬಂದಿಗಳು ನಿಗಧಿತ ಸಮಯಕ್ಕೆ ಹಾಜರಾಗಿಲ್ಲದಿರುವುದು ಕಂಡುಬಂತು. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗದ ಹಾಜರಾತಿ ಪುಸ್ತಕವನ್ನು ಪರಿಶೀಲಿಸಿದಾಗ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು ಡಿಸೆಂಬರ್ ಮಾಹೆಯಲ್ಲಿ ಹಾಜರಾತಿ ಹಾಕದಿರುವುದು ಕಂಡುಬಂದಿರುತ್ತದೆ.

ಬೇರೆ ಬೇರೆ ಕಛೇರಿಗಳ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸಲಾಗಿ ಸದರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಲ್ಲಿ ಶೇಕಡ 42 ರಷ್ಟು ಹಾಜರಾತಿ ಇರುವುದು ಕಂಡುಬಂದಿರುತ್ತದೆ. ಅಲ್ಲಿನ ಸಿಬ್ಬಂದಿಗಳು ಗುರುತಿನ ಚೀಟಿಯನ್ನು ಮತ್ತು ನಾಲ್ಕನೇ ದರ್ಜೆ ನೌಕರರು ಸಮವಸ್ತ್ರಗಳನ್ನು ಧರಿಸದಿರುವುದು ಕಂಡುಬಂತು. ಇದುವರೆವಿಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿಯವರು ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ತಪಾಸಣೆ ಕೈಗೊಂಡಿದ್ದರೂ ಹಾಗೂ ಇವರ ಬಗ್ಗೆ ಮಾನ್ಯ ಆಯುಕ್ತರು ಸುತ್ತೋಲೆಯನ್ನು ಹೊರಡಿಸಿದ್ದು, ಆ ಸುತ್ತೋಲೆಯ ಮೇರೆಗೆ ಅಲ್ಲಿನ ಜಂಟಿ ಆಯುಕ್ತರು ಕೂಡ ಎಲ್ಲಾ ಸಿಬ್ಬಂದಿಗಳು ಸಮಯಕ್ಕೆ ಸರಿಯಾಗಿ ಕಛೇರಿಗೆ ಹಾಜರಾಗುವಂತೆ ಕಛೇರಿ ಆದೇಶವನ್ನು ಹೊರಡಿಸಿದರೂ ಸಹ ಅದನ್ನು ಗಮನಿಸದ ಇಲ್ಲಿನ ಸಿಬ್ಬಂದಿ ವರ್ಗದವರು ಸಮಯಕ್ಕೆ ಸರಿಯಾಗಿ ಹಾಜರಾಗದೇ ಇರುವುದನ್ನು ಗಮನಿಸಿದ ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರು ಅಸಮಧಾನವನ್ನು ವ್ಯಕ್ತಪಡಿಸಿದರು.

ಸದರಿ ವಲಯದಲ್ಲಿ ಎರಡು ಪ್ರಹರಿ ವಾಹನಗಳಿದ್ದು, ಎರಡೂ ವಾಹನಗಳ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಬಹುತೇಕ ಕಛೇರಿಗಳಲ್ಲಿ ಬಟವಾಡೆ ಅಧಿಕಾರಿಗಳು ಹಾಜರಾತಿ ಪುಸ್ತಕವನ್ನು ಪರಿಶೀಲಿಸದೇ ಸಹಿ ಮಾಡಿರುವುದು ಕಂಡುಬರುತ್ತದೆ. ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಈ ಎಲ್ಲಾ ಲೋಪದೋಷಗಳನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿರುತ್ತಾರೆ.

ತಪಾಸಣೆ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತರೆಡ್ಡಿ, ಸದಸ್ಯರುಗಳಾದ ಶ್ರೀ ಆರ್. ಚಂದ್ರಶೇಖರಯ್ಯ, ಶ್ರೀ ಪಿಳ್ಳಪ್ಪ.ಎ.ಇ, ಶ್ರೀಮತಿ ವಸಂತಕುಮಾರಿ, ಶ್ರೀಮತಿ ಸುಮಿತ್ರಾ ವಿಜಯಕುಮಾರ್, ಶ್ರೀಮತಿ ಲಲಿತಾ ಮುಕುಂದರಾವ್, ಶ್ರೀಮತಿ ಸರಸ್ವತ್ತಮ್ಮ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** ದಿನಾಂಕ: 27.12.2010

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕ: 27.12.2010 ರಂದು ಕೆ.ಆರ್. ಪುರಂ ಪ್ರದೇಶದ ಚಿಕ್ಕತಿರುಪತಿ ಮುಖ್ಯರಸ್ತೆ, ಅಗಲೀಕರಣ, ಕಾಡುಗೋಡಿ ರೈಲ್ವೆ ಗೇಟ್ ರಸ್ತೆ (Via ಪಟಾಲಮ್ಮ ಲೇಔಟ್) ಸಬಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ತಪಾಸಣೆ ನಡೆಸಲಾಯಿತು.

1. ಕಾಡುಗೋಡಿ ಮುಖ್ಯ ರಸ್ತೆಯಿಂದ ಚಿಕ್ಕತಿರುಪತಿ ಮುಖ್ಯ ರಸ್ತೆಯ, ರಸ್ತೆ ಅಗಲೀಕರಣದ ಕಾಮಗಾರಿಯನ್ನು ಪರಿಶೀಲಿಸಲಾಯಿತು. ಸದರಿ ರಸ್ತೆಯನ್ನು ರೂ. 4.50 ಕೋಟಿಗಳ ವೆಚ್ಚದಲ್ಲಿ 2.3 ಕಿ.ಮೀಟರ್ ಉದ್ದ, 24 ಮೀಟರ್ ಅಗಲದ ರಸ್ತೆಯನ್ನು ಅಭಿವೃದ್ದಿ ಪಡಿಸಲಾಗುತ್ತಿದ್ದು, ಈ ರಸ್ತೆ ಅಗಲೀಕರಣದಿಂದ 23 ಖಾಸಗಿ ಆಸ್ತಿಗಳನ್ನು ಟಿ.ಡಿ.ಆರ್. ಅಡಿಯಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಅಜಯ್ ಎಂಟರ್‌ಪ್ರೈಸಸ್ & ಶ್ರೀ.ಶ್ರೀನಿವಾಸರೆಡ್ಡಿ ರವರು ಗುತ್ತಿಗೆದಾರರಾಗಿರುತ್ತಾರೆ. ಈ ರಸ್ತೆಯ ಇಕ್ಕೆಲಗಳಲ್ಲಿ ಸೈಜ್ ಕಲ್ಲುಗಳಿಂದ ನಿರ್ಮಿಸುತ್ತಿರುವ ಚರಂಡಿಗೆ ಉಪಯೋಗಿಸುತ್ತಿರುವ ಸಾಮಗ್ರಿಗಳು ಮತ್ತು ನಿರ್ಮಾಣಮಾಡುತ್ತಿರುವ ರೀತಿಯು ತೀರಾ ಕಳಪೆಮಟ್ಟದ್ದಾಗಿರುತ್ತವೆ. ಈ ಬಗ್ಗೆ ಸಮಿತಿಯು ಅಸಮಧಾನ ವ್ಯಕ್ತಪಡಿಸುತ್ತಾ, ಈ ಅಸಮರ್ಪಕ ಕಾಮಗಾರಿ ನಿರ್ವಹಣೆ ಬಗ್ಗೆ ಸದರಿ ಯೋಜನೆಯ Third party Civil tech ಸಂಸ್ಥೆರವರನ್ನು ತರಾಟೆಗೆ ತೆಗೆದುಕೊಂಡು ಈ ಕಾಮಗಾರಿಗೆ ಉಪಯೋಗಿಸುತ್ತಿರುವ ಮರಳು, ಜಲ್ಲಿ ಮತ್ತು ಕಾಂಕ್ರಿಟ್ ಹಾಗೂ ಮಡ್ಡಿ ಮಿಶ್ರಣವನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸುವಂತೆ ಸೂಚಿಸಲಾಯಿತು. ಮತ್ತು ಕಾಮಗಾರಿಯು ಅಸಮರ್ಪಕವಾಗಿರುವುದರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ಮುಖ್ಯ ಅಭಿಯಂತರರಿಗೆ ಸೂಚಿಸಲಾಯಿತು.

   ಇದೇ ರಸ್ತೆಯಲ್ಲಿ ಮೈತ್ರಿ ಅಪಾರ್ಟ್‌ಮೆಂಟ್ ರವರು ತಮ್ಮ ಸ್ವತ್ತಿನ ಉದ್ದಕ್ಕೂ ರಸ್ತೆಯ ಭಾಗದಲ್ಲಿ ಸರ್ಕಾರಿ ಜಾಗಕ್ಕೆ ಅಕ್ರಮವಾಗಿ ಮುಳ್ಳುತಂತಿ ಬೇಲಿ ನಿರ್ಮಿಸಿಕೊಂಡಿದ್ದು, ತಕ್ಷಣ ಈ ಬೇಲಿಯನ್ನು ತೆರವುಗೊಳಿಸಿ ಸದರಿ ಜಾಗವನ್ನು ಬಿ.ಬಿ.ಎಂ.ಪಿ ವಶಕ್ಕೆ ಪಡೆದುಕೊಳ್ಳಲು ಮುಖ್ಯ ಅಭಿಯಂತರರಿಗೆ ಸೂಚಿಸಲಾಯಿತು.

2. ಚಿಕ್ಕ ತಿರುಪತಿ ರಸ್ತೆಯಿಂದ ಕಾಡುಗೋಡಿ ಪೂರ್ವ ರೈಲ್ವೆ ಗೇಟ್‌ವರೆಗೆ (via ಪಟಾಲಮ್ಮ ಲೇಔಟ್) ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಲಾಯಿತು. 2.2 ಕಿ.ಮೀಟರ್ ಉದ್ದದ ರಸ್ತೆಯನ್ನು ರೂ. 3.98 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಸದರಿ ರಸ್ತೆಯನ್ನು ತೀರಾ ಅವೈಜ್ಞನಿಕವಾಗಿ ನಿರ್ಮಾಣ ಮಾಡುತ್ತಿರುವುದು ಕಂಡುಬಂದಿರುತ್ತದೆ. ಹಾಗೂ ನಿರ್ವಹಿಸುತ್ತಿರುವ ಕಾಮಗಾರಿಯೂ ಕೂಡ ತೀರ ಕಳಪೆ ಗುಣಮಟ್ಟದ್ದಾಗಿದ್ದು, ಈ ಬಗ್ಗೆ ಸಮಿತಿಯು ತೀವ್ರ ಆಕ್ಷೇಪ ವ್ಯಕ್ತ ಪಡಿಸುತ್ತಾ, **ತಕ್ಷಣ ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಮತ್ತು ಗುತ್ತಿಗೆದಾರರ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಮುಖ್ಯ ಅಭಿಯಂತರರಿಗೆ ಸೂಚಿಸಲಾಯಿತು**. ಈ ಕಾಮಗಾರಿಯನ್ನು ಯೋಜನಾಬದ್ಧವಾಗಿ ನಿರ್ಮಿಸದೇ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಅಡ್ಡಾದಿಡ್ಡಿಯಾಗಿ ರಸ್ತೆಯನ್ನು ನಿರ್ಮಿಸಿರುವುದು ಮತ್ತು ಕಾಡುಗೋಡಿ ರಸ್ತೆಯಲ್ಲಿರುವ ರೈಲ್ವೆ ಗೇಟ್‌ಬಳಿ 90ಡಿಗ್ರಿ ರಸ್ತೆ ತಿರುವು ಮಾಡಿರುವುದು

ಕಂಡುಬಂದಿದ್ದು, ಸದರಿ ಅಸಮರ್ಪಕ ಕಾಮಗಾರಿ ಬಗ್ಗೆ **ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರುಗಳಿಗೆ ನೋಟೀಸು ಜಾರಿಮಾಡುವಂತೆ ಮುಖ್ಯ ಅಭಿಯಂತರರಿಗೆ ಸ್ಥಳದಲ್ಲಿ ಆದೇಶಿಸಲಾಯಿತು**. ಮತ್ತು ಈ ಕಾಮಗಾರಿಯ ಸಮರ್ಪಕ ನಿರ್ವಹಣೆಯನ್ನು ಯೋಜನಾಬದ್ಧವಾಗಿ ರೂಪಿಸುವ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಸಿದ್ಧಪಡಿಸಿ ಮಂಡಿಸುವಂತೆ ಸೂಚಿಸಲಾಯಿತು.

3. ಮಹದೇವಪುರದಲ್ಲಿ ಡಾಃ ಅಂಬೇಡ್ಕರ್ ವಿವಿದೋದ್ದೇಶ ತರಭೇತಿ ಕೇಂದ್ರ ಮತ್ತು ಸಭಾಂಗಣ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಪರಿಶೀಲಿಸಲಾಯಿತು. ರೂ. 5.00ಕೋಟಿ ವೆಚ್ಚದಲ್ಲಿ ಕಾಮಗಾರಿಯನ್ನು KRIDL ರವರು ನಿರ್ವಹಿಸುತ್ತಿದ್ದು Third party civil Aid ಸಂಸ್ಥೆರವರು ನಿರ್ವಹಿಸುತ್ತಿದ್ದಾರೆ. 1440 ಆಸನಗಳ ಮತ್ತು 400 ನಾಲ್ಕು ಚಕ್ರದ ವಾಹನ ನಿಲುಗಡೆಗೆ ಅವಕಾಶವುಳ್ಳ ಕಟ್ಟವನ್ನು ನಿರ್ಮಿಸಲಾಗುತ್ತಿದೆ. ಸದರಿ ಕಾಮಗಾರಿಯು ವಿಳಂಬವಾಗಿದ್ದು, ಸ್ಥಳದಲ್ಲಿರುವ ಮಣ್ಣು ಡೆಬ್ರೀಸ್‌ನಿಂದ ಮುಚ್ಚಲ್ಪಟ್ಟಿದ್ದು, ಸಡಿಲಾದ ಮಣ್ಣನ್ನು ಪೂರ್ತಿ ತೆಗೆದು ನಂತರ ಅಗತ್ಯವಾದ ತಳಪಾಯದ ವಿನ್ಯಾಸವನ್ನು ರೂಪಿಸಲಾಗುತ್ತಿರುವುದಾಗಿ ಅಧಿಕಾರಿಗಳು ತಿಳಿಸಿರುತ್ತಾರೆ. ಸದರಿ ಕಾಮಗಾರಿಗೆ ಅಗತ್ಯವಿರುವ ಪರೀಕ್ಷೆಗಳನ್ನು ತ್ವರಿತವಾಗಿ ನಡೆಸಿ ಕಾಮಗಾರಿಯನ್ನು ಜರೂರಾಗಿ ಪ್ರಾರಂಭಿಸುವಂತೆ ಹಾಗೂ ಈ ಪ್ರದೇಶದಲ್ಲಿ ಸರ್ವೆ ನಡೆಸಿ ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ಪತ್ತೆ ಹಚ್ಚಲು ಅಧಿಕಾರಿಗಳಿಗೆ ಸೂಚಿಸಲಾಯಿತು. ಇದೇ ಯೋಜನೆ ಸ್ಥಳಕ್ಕೆ ಹೊಂದಿಕೊಂಡ ಮಳೆನೀರುಗಾಲುವೆ ಕಾಮಗಾರಿಯನ್ನು ಪರಿಶೀಲಿಸಲಾಗಿದ್ದು, ಈ ಕಾಲುವೆಯ ನಿರ್ಮಾಣಕ್ಕೆ ಅಡ್ಡಿಯಾಗಿರುವ ರಸ್ತೆಯಲ್ಲಿ ನಿರ್ಮಿಸಿರುವ ಮೂರು ಅನಧಿಕೃತ ಶೇಡ್‌ಗಳನ್ನು ತಕ್ಷಣ ತೆರವುಗೊಳಿಸಿ ಕಾಮಗಾರಿಯನ್ನು ತ್ವರಿತವಾಗಿ ಯೋಜನೆ ಪ್ರಕಾರ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

4. ಬೆನ್ನಿಗಾನಹಳ್ಳಿ ಸುರಂಗ ಮಾರ್ಗಕ್ಕೆ ಎರಡೂ ಬದಿಯಲ್ಲಿ approach ರಸ್ತೆ ನಿರ್ಮಾಣವನ್ನು ರೂ. 2.00 ಕೋಟಿಗಳ ವೆಚ್ಚದಲ್ಲಿ 7.5ಮೀಟರ್ ಅಗಲ ಇರುವಂತೆ ರಸ್ತೆಯನ್ನು ನಿರ್ಮಿಸಲಾಗುತ್ತಿದ್ದು, BWSSB ಕೊಳವೆ ಸ್ಥಳಾಂತರ ಕಾರ್ಯ ಪ್ರಗತಿಯಲ್ಲಿದ್ದು, ರಾಷ್ಟ್ರೀಯ ಹೆದ್ದಾರಿ 8 ಪಥದ ರಸ್ತೆಗೆ ಅನ್ವಯಿಸುವಂತೆ ಹಾದಿಸುಗಮವಾಗಲಿದ್ದು, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

ಈ ಸಂದರ್ಭದಲ್ಲಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ರವೀಂದ್ರ, ಸದಸ್ಯರುಗಳಾದ ಶ್ರೀ ಹರೀಶ್. ಎಸ್., ಶ್ರೀ ಅಬ್ದುಲ್ ರಖೀಬ್ ಝಾಕೀರ್, ಶ್ರೀ ಎಮ್. ಶಿವರಾಜು, ಶ್ರೀ ಉದಯಶಂಕರ್, ಶ್ರೀ ಟಿ. ತಿಮ್ಮೇಗೌಡ, ಶ್ರೀ ಸುರೇಶ್. ಹೆಚ್., ಶ್ರೀ ಎಸ್.ಎಸ್. ಪ್ರಸಾದ್, ಶ್ರೀ ಅಶ್ವತ್ಥ ನಾರಾಯಣಗೌಡ, ಪಾಲಿಕೆ ಸದಸ್ಯರಾದ ಶ್ರೀ ಆಂಜನೇಯ ರೆಡ್ಡಿ, ಪಾಲಿಕೆಯ ಹಿರಿಯ ಅಧಿಕಾರಿಗಳು ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**